

# ಕೈಗೆಟುಕಿದ ಆಸ್ಕರ್ ಕುಸುಮ

ಭಾರತದ ಚಿತ್ರರಸಿಕರ ಪಾಲಿಗೆ ಗಗನಕುಸುಮದಂತೆ ತೋರುತ್ತಿದ್ದ ಆಸ್ಕರ್ ಪ್ರಶಸ್ತಿ ಕೈಗೆಟುಕಿದ್ದು 2023ರ ಬೆಳ್ಳಿರೇಖೆಗಳಲ್ಲೊಂದು. ಅದೂ, ಒಮ್ಮೆಗೇ ಎರಡು ಪ್ರಶಸ್ತಿ! ಎರಡೂ ಪ್ರಶಸ್ತಿಗಳ ನಂಟು ದಕ್ಷಿಣ ಭಾರತದೊಂದಿಗೆ ಎನ್ನುವುದೂ ವಿಶೇಷವೇ.

ಕಾರ್ತಿಕಿ ಗೊನ್ಸಾಲ್ವೆಸ್ ನಿರ್ದೇಶನದ 'ದಿ ಎಲಿಫೆಂಟ್ ವಿಸ್ಪರರ್ಸ್' ತಮಿಳು ಸಾಕ್ಷ್ಯಚಿತ್ರ ಹಾಗೂ ರಾಜಮೌಳಿ ನಿರ್ದೇಶನದ ತೆಲುಗಿನ 'ಆರ್‌ಆರ್‌ಆರ್' ಸಿನಿಮಾಕ್ಕಾಗಿ ಕೀರವಾಣಿ ಸಂಗೀತ ಸಂಯೋಜಿಸಿರುವ 'ನಾಟು ನಾಟು' ಗೀತೆ ಆಸ್ಕರ್ ಪ್ರಶಸ್ತಿ ಗೌರವಕ್ಕೆ ಪಾತ್ರವಾದವು. ಈ ಎರಡು ಪ್ರಶಸ್ತಿಗಳು ಭಾರತದ ಸಿನಿಮಾವಲಯದಲ್ಲಿ ಸಹಜವಾಗಿಯೇ ಉತ್ಸಾಹ ಮತ್ತು ಸಂಭ್ರಮ ಮೂಡಿಸಿದವು. 'ಭಾರತೀಯ ಸಿನಿಮಾ' ಎಂದರೆ ಬಾಲಿವುಡ್ ಮಾತ್ರ ಎನ್ನುವ ಭ್ರಮೆಯ ನಿವಾರಣೆಯ ರೂಪದಲ್ಲೂ ಈ ಪ್ರಶಸ್ತಿಗಳನ್ನು ಗಮನಿಸಬೇಕು. ದಕ್ಷಿಣ ಭಾರತದ ಸಿನಿಮಾಗಳು ಜಾಗತಿಕ ಮಟ್ಟದಲ್ಲಿ ಸಾಧಿಸಿರುವ ಜನಪ್ರಿಯತೆಯ ಹೊಳಪನ್ನು ಆಸ್ಕರ್ ಪ್ರಶಸ್ತಿಗಳು ಹೆಚ್ಚಿಸುವಂತಿವೆ.

## 'ನಾಳೆ'ಗಳಲ್ಲಿ...

2023, ಭಾರತಕ್ಕೆ ಒಂದು ಪ್ರಮುಖ ವರ್ಷ ಎನಿಸುವುದು ಜನಸಂಖ್ಯೆಯ ವಿಷಯದಲ್ಲಿ. ಜನಸಂಖ್ಯೆಯಲ್ಲಿ ಇದುವರೆಗೂ ಮುಂದಿದ್ದ ಚೀನಾ ದೇಶವನ್ನು ಹಿಂದಿಕ್ಕಿ ಭಾರತ ಮೊದಲ ಸ್ಥಾನಕ್ಕೆ ಬಂದಿರುವುದು ಗಮನಿಸಬೇಕಾದ ಬಹುಮುಖ್ಯ ಸಂಗತಿ. ಆದರೆ ಜನಸಂಖ್ಯೆಯ ಹೆಚ್ಚಳದ ಕಾರಣವಾಗಿ ಮಾನವನ ಬದುಕಿಗೆ ಅತ್ಯಗತ್ಯವಾದ ಯಾವುದೇ ಮೂಲಸೌಲಭ್ಯಗಳ ಕೊರತೆ ಉಂಟಾಗದಂತೆ ನಿರ್ವಹಣೆ ಮಾಡುವುದು ಸರ್ಕಾರಗಳ ಜವಾಬ್ದಾರಿ. ಜನಸಂಖ್ಯೆಯ ಹೆಚ್ಚಳಕ್ಕೆ ಪೂರಕವಾಗಿ ವಿಶ್ವದರ್ಜೆಯ ಶಿಕ್ಷಣ, ಆರೋಗ್ಯ ಮತ್ತು ಕೌಶಲ ಅಭಿವೃದ್ಧಿಗೆ ನಮ್ಮ ಸರ್ಕಾರಗಳು ತೀವ್ರವಾದ ರೀತಿಯಲ್ಲಿ ಗಮನಹರಿಸದಿದ್ದರೆ, ಮುಂದಿನ ವರ್ಷಗಳಲ್ಲಿ ಭಾರಿ ದಂಡ ತೆರಬೇಕಾಗುವ ಎಲ್ಲಾ ಸಾಧ್ಯತೆಗಳೂ ಇವೆ. ನಿರ್ವಹಣೆ ವಿಷಯದಲ್ಲಿ ಎಡವಿದರೆ ನಮ್ಮ ನಾಳೆಗಳು ಖಂಡಿತವಾಗಿಯೂ ಅಭದ್ರವಾಗಿರುತ್ತವೆ.



ಮರೆಯಲಿ ಹ್ಯಾಂಗ 2023

**-ಪೂಜಾ ಗಾಂಧಿ, ನಟಿ**

## ಮೃತ್ಯುವಿನ ಬಾಯಿಯಿಂದ ಕಾರ್ಮಿಕರು ಪಾರು

ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರನ್ನು ರಕ್ಷಿಸುವ ಕಾರ್ಯಾಚರಣೆ ಯಶಸ್ವಿಯಾದುದು 2023ರಲ್ಲಿ ಭಾರತೀಯರ ಹರ್ಷ–ನೆಮ್ಮದಿಗೆ ಕಾರಣವಾದ ಮತ್ತೊಂದು ವಿದ್ಯಮಾನ.

ನವೆಂಬರ್ 12ರ ಬೆಳಗಿನ ಜಾವ 5.30ರ ಸಮಯದಲ್ಲಿ ಯಮುನೋತ್ರಿ ಹೆದ್ದಾರಿಗೆ ನಿರ್ಮಿಸಲಾಗುತ್ತಿದ್ದ ಸಿಲ್ಕ್ಯಾರಾ ಸುರಂಗ ಮಾರ್ಗದಲ್ಲಿ ಉಂಟಾದ ಭೂ ಕುಸಿತದಿಂದಾಗಿ 41 ಕಾರ್ಮಿಕರು ಸುರಂಗದಲ್ಲಿ ಸಿಲುಕಿಕೊಂಡರು. ಅವರನ್ನು ಸಂರಕ್ಷಿಸುವ ಕಾರ್ಯಾಚರಣೆಗೆ ಹೆಬ್ಬಂಡೆಗಳು ಹಾಗೂ ಪದೇಪದೇ ಕುಸಿಯುತ್ತಿದ್ದ ಭೂಮಿ ತೊಡಕಾಗಿ ಪರಿಣಮಿಸಿದ್ದವು. 17 ದಿನಗಳ ಕಾರ್ಯಾಚರಣೆಯ ನಂತರ, ನವೆಂಬರ್ 28ರಂದು ಎಲ್ಲ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆತರಲಾಯಿತು. ಈ ಕಾರ್ಯಾಚರಣೆಯಲ್ಲಿ 'ಇಲಿ ಬಿಲ ಗಣಿಗಾರಿಕೆ' (ರ್‍ಯಾಟ್ ಹೋಲ್ ಮೈನಿಂಗ್) ತಂತ್ರಜ್ಞರು ಪ್ರಮುಖ ಪಾತ್ರ ವಹಿಸಿದರು.

